ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ ಅವ್ಯಕ್ತ ಮುರಳಿ 13-02-2003.

# *ವರ್ತಮಾನ ಸಮಯದಲ್ಲಿ ತಮ್ಮ ದಯಾ ಹೃದಯ ಹಾಗೂ ದಾತಾ ಸ್ವರೂಪವನ್ನು ಪ್ರತ್ಯಕ್ಷ ಮಾಡಿರಿ*

(वर्तमान समय अपना रहमदिल और दाता स्वरूप प्रत्यक्ष करो)

ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

- ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.
- ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.
- ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.
- ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

ಇಂದು ವರದಾತಾ ತಂದೆ ತನ್ನ ಜ್ಞಾನದಾತಾ, ಶಕ್ತಿದಾತಾ, ಗುಣದಾತಾ, ಪರಮಾತ್ಮನ ಸಂದೇಶವಾಹಕ ಮಕ್ಕಳನ್ನು ನೋಡುತ್ತಿದ್ದಾರೆ. ಪ್ರತಿಯೊಂದು ಮಗು ದಾತನಾಗಿ ಆತ್ಮರನ್ನು ತಂದೆಯ ಸಮೀಪ ತರಲು ಅಂತರಾಳದಿಂದ ಪ್ರಯತ್ನ ಮಾಡುತ್ತಿದೆ. ವಿಶ್ವದಲ್ಲಿ ಅನೇಕ ಪ್ರಕಾರದ ಆತ್ಮರು ಇದ್ದಾರೆ. ಕೆಲ ಆತ್ಮರಿಗೆ ಜ್ಞಾನಾಮೃತ ಬೇಕು, ಕೆಲ ಆತ್ಮರಿಗೆ ಶಕ್ತಿ ಬೇಕು, ಗುಣ ಬೇಕು ತಾವು ಆತ್ಮರ ಬಳಿ ಸರ್ವ ಖಜಾನೆಗಳು ಅಖಂಡವಾಗಿವೆ. ಪ್ರತಿಯೊಂದು ಆತ್ಮನ ಕಾಮನೆಯನ್ನು ಪೂರ್ಣ ಮಾಡುವಂತಹವರು ಆಗಿದ್ದೀರಿ. ದಿನ-ಪ್ರತಿ ದಿನ ಸಮಾಪ್ತಿಯ ಸಮಯ ಸಮೀಪ ಬರುತ್ತಿರುವ ಕಾರಣ ಈಗ ಆತ್ಮರು ಯಾವುದಾದರೂ ಹೊಸ ಆಶ್ರಯವನ್ನು ಹುಡುಕುತ್ತಿದ್ದಾರೆ. ಅಂದಮೇಲೆ ತಾವು ಆತ್ಮರು ಹೊಸ ಆಶ್ರಯವನ್ನು ಕೊಡಲು ನಿಮಿತ್ತರಾಗಿದ್ದೀರಿ. ಬಾಪ್‌ದಾದಾ ಮಕ್ಕಳ ಉತ್ಸಾಹ ಉಲ್ಲಾಸವನ್ನು ನೋಡಿ ಖುಷಿ ಆಗಿದ್ದಾರೆ. ಒಂದುಕಡೆ ಅವಶ್ಯಕತೆ ಇದೆ, ಇನ್ನೊಂದು ಕಡೆ ಉತ್ಸಾಹ ಉಲ್ಲಾಸವಿದೆ. ಅವಶ್ಯಕತೆಯ ಸಮಯದಲ್ಲಿ ಒಂದು ಹನಿಯದ್ದೂ ಸಹ ಬಹಳ ಮಹತ್ವಿಕೆ ಇದೆ. ಅಂದಮೇಲೆ ಈ ಸಮಯದಲ್ಲಿ ತಾವು ಕೊಡುವ ಸಹಯೋಗದ, ಸಂದೇಶದ ಮಹತ್ವವಿದೆ.

ವರ್ತಮಾನ ಸಮಯವು ತಾವು ಎಲ್ಲಾ ಮಕ್ಕಳ ದಯಾ ಹೃದಯ ಹಾಗೂ ದಾತಾ ಸ್ವರೂಪ ಪ್ರತ್ಯಕ್ಷವಾಗುವ ಸಮಯವಾಗಿದೆ. ತಾವು ಬ್ರಾಹ್ಮಣ ಆತ್ಮರ ಅನಾದಿ ಸ್ವರೂಪದಲ್ಲಿಯೂ ದಾತಾತನದ ಸಂಸ್ಕಾರವು ತುಂಬಿದೆ. ಆದ್ದರಿಂದ ಕಲ್ಪ ವೃಕ್ಷದ ಚಿತ್ರದಲ್ಲಿ ತಮ್ಮನ್ನು ವೃಕ್ಷದ ಬೇರಿನಲ್ಲಿ ತೋರಿಸಲಾಗಿದೆ ಏಕೆಂದರೆ ಬೇರಿನ ಮೂಲಕವೇ ಪೂರ್ಣ ವೃಕ್ಷಕ್ಕೆ ಎಲ್ಲಾ ತಲುಪುತ್ತದೆ. ತಮ್ಮ ಆದಿ ಸ್ವರೂಪ ದೇವತಾ ರೂಪ, ಅದರ ಅರ್ಥವೇ ದೇವತಾ ಅರ್ಥಾತ್ ಕೊಡುವಂತಹವರು. ತಮ್ಮ ಮಧ್ಯದ ಸ್ವರೂಪ ಪೂಜ್ಯದ ಚಿತ್ರವಾಗಿದೆ ಅಂದಮೇಲೆ ಮಧ್ಯದ ಸಮಯದಲ್ಲಿಯೂ ಸಹ ಪೂಜ್ಯರೂಪದಲ್ಲಿ ತಾವು ವರದಾನವನ್ನು ನೀಡುವಂತಹವರು, ಆಶೀರ್ವಾದವನ್ನು ನೀಡುವಂತಹ ದಾತಾ ಸ್ವರೂಪರಾಗಿದ್ದೀರಿ ಅಂದಮೇಲೆ ತಾವು ಆತ್ಮರ ವಿಶೇಷ ಸ್ವರೂಪವೇ ದಾತಾತನದ್ದಾಗಿದೆ. ಈಗಲೂ ಪರಮಾತ್ಮನ ಸಂದೇಶ ವಾಹಕರಾಗಿ ವಿಶ್ವದಲ್ಲಿ ತಂದೆಯ ಪ್ರತ್ಯಕ್ಷತೆಯ ಸಂದೇಶವನ್ನು ಹರಡುತ್ತಿದ್ದೀರಿ. ಪ್ರತಿಯೊಬ್ಬ ಬ್ರಾಹ್ಮಣ ಮಗು ಪರಿಶೀಲನೆ ಮಾಡಿಕೊಳ್ಳಿರಿ ಅನಾದಿ, ಆದಿ ದಾತನ ಸಂಸ್ಕಾರ ಪ್ರತಿಯೊಬ್ಬರ ಜೀವನದಲ್ಲಿ ಪ್ರತ್ಯಕ್ಷ ರೂಪದಲ್ಲಿ ಇರುತ್ತದೆಯೇ? ದಾತಾತನದ ಸಂಸ್ಕಾರ ಇರುವಂತಹ ಆತ್ಮರ ಲಕ್ಷಣವಾಗಿದೆ - ಅವರು ಎಂದೂ ಸಹ ಸಂಕಲ್ಪ ಮಾತ್ರದಲ್ಲಿಯೂ ಯಾರಾದರೂ ಕೊಟ್ಟರೇ ಕೊಡುತ್ತೇನೆ. ಯಾರಾದರೂ ಮಾಡಿದರೆ ಮಾಡುತ್ತೇನೆ, ಎನ್ನುವುದಿಲ್ಲ. ನಿರಂತರ ತೆರೆದ ಭಂಡಾರವಾಗಿರುತ್ತಾರೆ. ಬಾಪ್‌ದಾದಾ ಎಲ್ಲಾ ಕಡೆಯ ಮಕ್ಕಳ ದಾತತನದ ಸಂಸ್ಕಾರವನ್ನು ನೋಡುತ್ತಿದ್ದಾರೆ. ಏನು ನೋಡಿರಬಹುದು? ನಂಬರ್‌ವಾರಂತೂ ಇದ್ದೀರಿ. ಎಂದೂ ಸಹ ಈ ಸಂಕಲ್ಪವನ್ನು ಮಾಡಬೇಡಿ - ಈ ರೀತಿ ಆದರೆ ನಾನು ಇದನ್ನು ಮಾಡುತ್ತೇನೆ. ದಾತಾತನದ ಸಂಸ್ಕಾರದವರಿಗೆ ಎಲ್ಲಾ ಕಡೆಯಿಂದ ಸಹಯೋಗವು ಸ್ವತಃವಾಗಿ ಪ್ರಾಪ್ತಿ ಆಗುತ್ತದೆ. ಕೇವಲ ಆತ್ಮರ ಮೂಲಕ ಮಾತ್ರವಲ್ಲ. ಆದರೆ ಪ್ರಕೃತಿಯೂ ಸಹ ಸಮಯಕ್ಕನುಸಾರವಾಗಿ ಸಹಯೋಗಿ ಆಗುತ್ತದೆ. ಇದು ಸೂಕ್ಷ್ಮ ಲೆಕ್ಕಾಚಾರವಾಗಿದೆ ಯಾರು ಸದಾ ದಾತರಾಗುತ್ತಾರೆಯೋ, ಆ ಪುಣ್ಯದ ಫಲವಾಗಿ ಸಮಯಕ್ಕೆ ಸಹಯೋಗ, ಸಮಯಕ್ಕೆ ಸಫಲತೆ ಆ ಆತ್ಮನಿಗೆ ಸಹಜವಾಗಿ ಪ್ರಾಪ್ತಿಯಾಗುತ್ತದೆ. ಆದ್ದರಿಂದ ಸದಾ ದಾತಾತನದ ಸಂಸ್ಕಾರವನ್ನು ಪ್ರತ್ಯಕ್ಷ ಸ್ವರೂಪದಲ್ಲಿ ಇಟ್ಟುಕೊಳ್ಳಿ. *ಪುಣ್ಯದ ಖಾತೆ ಒಂದಕ್ಕೆ 10ರಷ್ಟು ಫಲ ಕೊಡುತ್ತದೆ ಅಂದಮೇಲೆ ಇಡೀ ದಿನದಲ್ಲಿ ನೋಟ್ ಮಾಡಿಕೊಳ್ಳಿ - ಸಂಕಲ್ಪದ ಮೂಲಕ, ವಚನದ ಮೂಲಕ, ಸಂಬಂಧ-ಸಂಪರ್ಕದ ಮೂಲಕ ಪುಣ್ಯಾತ್ಮರಾಗಿ ಪುಣ್ಯದ ಖಾತೆಯನ್ನು ಎಷ್ಟು ಜಮಾ ಮಾಡಿಕೊಂಡಿದ್ದೇನೆ? ಮನಸಾ ಸೇವೆಯೂ ಸಹ ಪುಣ್ಯದ ಖಾತೆಯಲ್ಲಿ ಜಮಾ ಆಗುತ್ತದೆ. ವಚನದ ಮೂಲಕ ಯಾವುದಾದರೂ ಬಲಹೀನ ಆತ್ಮವನ್ನು ಖುಷಿಯಲ್ಲಿ ತರುವುದು, ಚಿಂತೆಯಲ್ಲಿ ಇರುವಂತಹ ಆತ್ಮಕ್ಕೆ ಸ್ವಮಾನದ ಸ್ಮೃತಿಯಲ್ಲಿ ತರುವುದು. ಬೇಸರವಾದ ಆತ್ಮವನ್ನು ತಮ್ಮ ವಚನದ ಮೂಲಕ ಉತ್ಸಾಹ ಉಲ್ಲಾಸದಲ್ಲಿ ತರುವುದು, ಸಂಬಂಧ-ಸಂಪರ್ಕದಿಂದ ತಮ್ಮ ಶ್ರೇಷ್ಠ ಸಂಗದ ರಂಗಿನ ಅನುಭವ ಮಾಡಿಸುವುದು, ಈ ವಿಧಿಯಿಂದ ಪುಣ್ಯದ ಖಾತೆಯನ್ನು ಜಮಾ ಮಾಡಿಕೊಳ್ಳಬಹುದು. ಈ ಜನ್ಮದಲ್ಲಿ ಎಷ್ಟು ಪುಣ್ಯದ ಜಮಾ ಮಾಡಿಕೊಳ್ಳುತ್ತೀರೋ ಆ ಪುಣ್ಯದ ಖಾತೆಯನ್ನು ಅರ್ಧ ಕಲ್ಪ ಅನುಭವಿಸುತ್ತೀರಿ ಹಾಗೂ ಅರ್ಧ ಕಲ್ಪ ತಮ್ಮ ಜಡ ಚಿತ್ರವು ಪಾಪಿ ಆತ್ಮರನ್ನು ವಾಯುಮಂಡಲದ ಮೂಲಕ ಪಾಪಗಳಿಂದ ಮುಕ್ತ ಮಾಡುತ್ತದೆ.* ಪತಿತಪಾವನಿ ಆಗುತ್ತೀರಿ. ಅಂದಮೇಲೆ ಬಾಪ್‌ದಾದಾ ಪ್ರತಿಯೊಬ್ಬ ಮಗುವಿನ ಜಮಾ ಆಗಿರುವ ಪುಣ್ಯದ ಖಾತೆಯನ್ನು ನೋಡುತ್ತಿದ್ದಾರೆ.

ಬಾಪ್‌ದಾದಾ ವರ್ತಮಾನ ಸಮಯದ ಮಕ್ಕಳ ಸೇವೆಯ ಉತ್ಸಾಹ ಉಲ್ಲಾಸಗಳನ್ನು ನೋಡಿ ಖುಷಿ ಪಡುತ್ತಿದ್ದಾರೆ. ಮೆಜಾರಿಟಿ ಮಕ್ಕಳಲ್ಲಿ ಸೇವೆಯ ಉಲ್ಲಾಸವು ಚೆನ್ನಾಗಿದೆ. ಎಲ್ಲರೂ ತಮ್ಮ-ತಮ್ಮ ಕಡೆಯಿಂದ ಸೇವೆಯ ಯೋಜನೆಗಳನ್ನು ಕಾರ್ಯ ರೂಪದಲ್ಲಿ ತರುತ್ತಿದ್ದಾರೆ. ಇದಕ್ಕಾಗಿ ಬಾಪ್‌ದಾದಾ ಮನಃಪೂರ್ವಕವಾಗಿ ಶುಭಾಶಯಗಳನ್ನು ಕೊಡುತ್ತಿದಾರೆ. ಚೆನ್ನಾಗಿ ಮಾಡುತ್ತಿದ್ದೀರಿ ಹಾಗೂ ಚೆನ್ನಾಗಿ ಮಾಡುತ್ತಿರುತ್ತೀರಿ. ಎಲ್ಲದಕ್ಕಿಂತ ಒಳ್ಳೆಯ ಮಾತು ಇದಾಗಿದೆ - ಎಲ್ಲರ ಸಂಕಲ್ಪ ಹಾಗೂ ಸಮಯ ವ್ಯಸ್ತವಾಗಿಬಿಟ್ಟಿದೆ. ಪ್ರತಿಯೊಬ್ಬರಿಗೂ ಈ ಗುರಿ ಇದೆ ನಾಲ್ಕೂ ಕಡೆಯ ಸೇವೆಯಿಂದ ಈಗ ದೂರುಗಳನ್ನು ಖಂಡಿತ ಪೂರ್ಣ ಮಾಡಬೇಕು. ದಾದಿ 9 ಲಕ್ಷ ಜನರನ್ನು ತಯಾರು ಮಾಡಬೇಕು ಎನ್ನುತ್ತಿದ್ದಾರೆ ಒಂದು ವೇಳೆ 3-4 ಸ್ಥಾನಗಳಿಂದ ಲಕ್ಷ ಜನರು ಬಂದರೂ ಏನಾಗುತ್ತದೆ 6 ಲಕ್ಷ ಜನರಂತೂ ಇದ್ದೀರಿ ಇನ್ನೂ ಮೂರು ಲಕ್ಷ ಬೇಕು ಅಷ್ಟೇ, ದೇಶದಲ್ಲಿ ಮತ್ತು ವಿದೇಶದಲ್ಲಿಯೂ ಎಲ್ಲರೂ ಸಂದೇಶವನ್ನು ಕೊಡುತ್ತಿದ್ದಾರೆ.  ಉತ್ಸಾಹವು ಬಹಳ ಚೆನ್ನಾಗಿದೆ ಎಂಬುವ ವಿಷಯವನ್ನೂ ಬಾಪ್‌ದಾದಾ ಕೇಳಿಸಿಕೊಂಡರು. ಅಲ್ಲಿಯೂ ಒಳ್ಳೆಯ ಪ್ರೋಗ್ರಾಮ್ಸ್ ಅನ್ನು ತಯಾರು ಮಾಡುತ್ತಿದ್ದೀರಲ್ಲವೇ! ಪ್ರತಿಯೊಂದು ಸ್ಥಾನದಲ್ಲಿ ಯಾರ ವಿಧಿ ಅವರಿಗೆ ಇರುತ್ತದೆ .ಆದರೆ ಸೇವೆಯ ಉತ್ಸಾಹ ಎಲ್ಲರಲ್ಲಿಯೂ ಇದೆ. ಮೂರು ಲಕ್ಷಗಳನ್ನು ಹೆಚ್ಚಿಸುವುದು ಯಾವುದಾದರೂ ದೊಡ್ಡ ವಿಷಯವೇ, ದೊಡ್ಡ ವಿಷಯವೇ? ಮೊದಲ ನಂಬರ್ ನಲ್ಲಿ ಗುಜರಾತ್ ನವರು ಕತ್ತಿ ಎತ್ತಿದ್ದಾರೆ. ಚೆನ್ನಾಗಿ ಮಾಡಿದ್ದಾರೆ. ಗುಜರಾತಿಗೆ ಎಷ್ಟು ಸೇವಾಕೇಂದ್ರಗಳು ಇವೆ? 200 ಸೇವಾ ಕೇಂದ್ರಗಳು ಮತ್ತು ಸಾವಿರ ಉಪಸೇವಾ ಕೇಂದ್ರಗಳು ಇವೆ.  ಒಂದೊಂದು ಸೇವಾಕೇಂದ್ರದಿಂದ 10 ಜನ ಬಂದರೂ ಎಷ್ಟು ಜನ ತಯಾರಾಗುತ್ತಾರೆ? ಅದೇ ರೀತಿ ದಿಲ್ಲಿ, ಬಾಂಬೆ, ಮದ್ರಾಸ್ ಎಲ್ಲರೂ ಇದ್ದಾರೆ.  ಕಲ್ಕತ್ತಾ, ಹೈದರಾಬಾದ್, ವಿದೇಶದವರೂ ಇದ್ದಾರೆ ಮತ್ತು 3 ಲಕ್ಷ ಜನರನ್ನು ತಯಾರು ಮಾಡುವುದು ದೊಡ್ಡ ವಿಷಯವೇ, ದೊಡ್ಡ ವಿಷಯವೇ? ಟೀಚರ್ಸ್ ಹೇಳಿ 9 ಲಕ್ಷ ಜನರು ತಯಾರಾಗಿಬಿಡುತ್ತಾರಲ್ಲವೆ?  ಇದರಲ್ಲಿ ಕೈಯನ್ನು ಅಲುಗಾಡಿಸುತ್ತಿಲ್ಲ. ಪಾಂಡವರು ಕೈಯನ್ನು ಅಲುಗಾಡಿಸುತ್ತಿದ್ದಾರೆ. ಬ್ರಾಹ್ಮಣರ ದೃಢ ಸಂಕಲ್ಪದಲ್ಲಿ ಬಹಳ ಶಕ್ತಿ ಇದೆ. ಒಂದುವೇಳೆ ಬ್ರಾಹ್ಮಣರು ದೃಢ ಸಂಕಲ್ಪ ಮಾಡಿದರೆ ಏನು ತಾನೇ ಮಾಡಲು ಸಾಧ್ಯವಿಲ್ಲ! ಎಲ್ಲವೂ ಆಗುತ್ತದೆ ಕೇವಲ ಯೋಗವನ್ನು ಜ್ವಾಲಾ ರೂಪವಾಗಿ  ಮಾಡಿಕೊಳ್ಳಿ. ಯೋಗವು ಜ್ವಾಲಾ ರೂಪವಾದರೆ ಜ್ವಾಲೆಯ ಹಿಂದೆ ಆತ್ಮರೂ ಸ್ವತಃವಾಗಿ ಬರುತ್ತಾರೆ. ಏಕೆಂದರೆ ಜ್ವಾಲೆ (ಲೈಟ್) ಸಿಗುವುದರಿಂದ ಅವರಿಗೆ ಮಾರ್ಗವು ಕಾಣಿಸುತ್ತದೆ. ಈಗ ಯೋಗ ಮಾಡುತ್ತಿದ್ದೀರಿ ಆದರೆ ಯೋಗವು ಜ್ವಾಲಾ ರೂಪವಾಗಬೇಕು. ಸೇವೆಯ ಉತ್ಸಾಹ ಉಲ್ಲಾಸಗಳು ಚೆನ್ನಾಗಿ ವೃದ್ಧಿ ಆಗುತ್ತಿವೆ. ಆದರೆ ಯೋಗದಲ್ಲಿ ಜ್ವಾಲಾ ರೂಪವನ್ನು ಈಗ ಅಂಡರ್ಲೈನ್(ಗಮನ ಕೊಡಬೇಕು) ಮಾಡಿಕೊಳ್ಳಿರಿ. ತಮ್ಮ ದೃಷ್ಟಿಯಲ್ಲಿ ಆ ರೀತಿ ಹೊಳಪು ಇರಲಿ ಆ ದೃಷ್ಟಿಯಿಂದ ಒಂದಲ್ಲ ಒಂದು ಪ್ರಕಾರದ ಅನುಭೂತಿಯ ಅನುಭವವನ್ನು ಮಾಡಲಿ.

ಬಾಪ್‌ದಾದಾರವರಿಗೆ ವಿದೇಶದವರು ಸಮಯದ ಕೂಗು ಎಂದು ಮಾಡಿರುವ ಸೇವೆಯ ವಿಧಿ ಇಷ್ಟವಾಯಿತು. ಚಿಕ್ಕ ಸಂಘಟನೆಯನ್ನು ಸಮೀಪ ತಂದರು. ಆ ರೀತಿ ಪ್ರತಿಯೊಂದು ಜೋನ್, ಪ್ರತಿಯೊಂದು ಸೇವಾಕೇಂದ್ರವು ಬೇರೆ-ಬೇರೆ ಸೇವೆಯನ್ನು ಮಾಡುತ್ತಿದ್ದೀರಿ ಆದರೆ ಯಾರಾದರೂ ಸರ್ವ ವರ್ಗಗಳ ಸಂಘಟನೆಯನ್ನು ಮಾಡಿ. ಬಾಪ್‌ದಾದಾ ಹೇಳಿದರು ಹರಡಿರುವಂತಹ ಸೇವೆಯು ಬಹಳಷ್ಟು ಇದೆ ಆದರೆ ಹರಡಿರುವ ಸೇವೆಯಿಂದ ಸ್ವಲ್ಪ ಸಮೀಪ ಬರುವಂತಹ ಯೋಗ್ಯ ಆತ್ಮರ ಸಂಘಟನೆಯನ್ನು ಆರಿಸಿಕೊಳ್ಳಿ ಹಾಗೂ ಸಮಯ ಪ್ರತಿ ಸಮಯ ಆ ಸಂಘಟನೆಯನ್ನು ಸಮೀಪ ತರುತ್ತಾ

ಇರಿ ಹಾಗೂ ಅವರಿಗೆ ಸೇವೆಯ ಉಲ್ಲಾಸವನ್ನು ಹೆಚ್ಚಿಸಿ. ಬಾಪ್‌ದಾದಾ ನೋಡುತ್ತಾರೆ - ಅಂತಹ ಆತ್ಮರು ಇದ್ದಾರೆ ಆದರೆ ಈಗ ಆ ರೀತಿಯಾದ ಶಕ್ತಿಶಾಲಿ ಪಾಲನೆ, ಸಂಘಟಿತ ರೂಪದಲ್ಲಿ ಸಿಗುತ್ತಿಲ್ಲ, ಬೇರೆ-ಬೇರೆ ಯಥಾಶಕ್ತಿಯ ಪಾಲನೆಯು ಸಿಗುತ್ತಿದೆ. ಸಂಘಟನೆಯಲ್ಲಿ ಒಬ್ಬರನ್ನೊಬ್ಬರು ನೋಡಿಯೂ ಸಹ ಉಲ್ಲಾಸವು ಬರುತ್ತದೆ. ಇವರು ಇದನ್ನು ಮಾಡುತ್ತಿದ್ದಾರೆ. ನಾನೂ ಸಹ ಮಾಡಬಹುದು, ನಾನು ಮಾಡುತ್ತೇನೆ ಎಂಬ ಉಲ್ಲಾಸ ಬರುತ್ತದೆ. ಬಾಪ್‌ದಾದಾ ಈಗ ಸೇವೆಯ ಪ್ರತ್ಯಕ್ಷವನ್ನು ಸಂಘಟಿತ ರೂಪದಲ್ಲಿ ನೋಡಲು ಇಚ್ಛಿಸುತ್ತಾರೆ. ಪ್ರಯತ್ನ ಚೆನ್ನಾಗಿ ಮಾಡುತ್ತಿದ್ದೀರಿ, ಪ್ರತಿಯೊಬ್ಬರೂ ತಮ್ಮ ವರ್ಗದ, ಸ್ಥಾನದ, ಜೋನಿನ, ಸೇವಾಕೇಂದ್ರದ ಸೇವೆಯನ್ನು ಮಾಡುತ್ತಿದ್ದೀರಿ ಬಾಪ್‌ದಾದಾ ಖುಷಿ ಆಗುತ್ತಾರೆ. ಈಗ ಸಮೀಪದಲ್ಲಿ ತನ್ನಿ, ಪ್ರವೃತ್ತಿಯವರ ಉಲ್ಲಾಸವು ಬಾಪ್‌ದಾದಾರವರ ಬಳಿ ತಲುಪುತ್ತದೆ ಹಾಗೂ ಡಬಲ್ ವಿದೇಶದವರೂ ಸಹ ಡಬಲ್ ಕಾರ್ಯದಲ್ಲಿ ಇರುತ್ತಾ ಸೇವೆಯಲ್ಲಿ, ಸ್ವಯಂನ ಪುರುಷಾರ್ಥದಲ್ಲಿ ಇದ್ದಾರೆ, ಇದನ್ನು ನೋಡಿಯೂ ಸಹ ಬಾಪ್‌ದಾದಾ ಖುಷಿಯಾಗಿದ್ದಾರೆ.

ಬ್ರಾಹ್ಮಣ ಆತ್ಮರು ವರ್ತಮಾನ ವಾಯುಮಂಡಲವನ್ನು ನೋಡಿ ವಿದೇಶದಲ್ಲಿ ಹೆದರುತ್ತಿಲ್ಲವೇ? ಡಬಲ್ ವಿದೇಶಿಗಳು ಏರು-ಪೇರಿನಲ್ಲಿ ಇದ್ದೀರೋ ಅಥವಾ ಅಚಲರಾಗಿದ್ದೀರೋ? ಆಚಲರೇ? ಏರು-ಪೇರಿನಲ್ಲಿ ಇಲ್ಲ ತಾನೇ! ಯಾರು ಅಚಲರಾಗಿದ್ದೀರೋ ಅವರು ಕೈಯನ್ನು ಎತ್ತಿರಿ, ಅಚಲರಾಗಿದ್ದೀರಿ. ನಾಳೆ ಏನಾದರೂ ಆಗಿಬಿಟ್ಟರೆ? ಆದರೂ ಸಹ ಅಚಲರಾಗಿರುತ್ತೀರಲ್ಲವೇ! ಏನಾಗುತ್ತದೆ, ಏನೂ ಆಗುವುದಿಲ್ಲ. ತಾವು ಬ್ರಾಹ್ಮಣರ ಮೇಲೆ ಪರಮಾತ್ಮನ ಛತ್ರಛಾಯೆ ಇದೆ. ಹೇಗೆ ವಾಟರ್ ಪ್ರೂಫ್ ಎಷ್ಟೇ ನೀರು ಇದ್ದರೂ ಸಹ ವಾಟರ್ ಪ್ರೂಫ್ ಆಗಿಬಿಡುತ್ತದೆ ಹಾಗೆಯೇ ಎಷ್ಟೇ ಏರು-ಪೇರು ಇರಲಿ ಬ್ರಾಹ್ಮಣ ಆತ್ಮರು ಪರಮಾತ್ಮನ ಛತ್ರಛಾಯೆಯ ಒಳಗಡೆ ಸದಾ ನಿಶ್ಚಿಂತರು. ನಿಶ್ಚಿಂತ ಚಕ್ರವರ್ತಿಗಳು ತಾನೇ! ಸ್ವಲ್ಪ-ಸ್ವಲ್ಪ ಚಿಂತೆ ಇದೆಯೇ, ಏನು ಆಗುತ್ತದೋ? ಇಲ್ಲ. ನಿಶ್ಚಿಂತ. ಸ್ವರಾಜ್ಯಾಧಿಕಾರಿಗಳು ಆಗಿ, ನಿಶ್ಚಿಂತ ಚಕ್ರವರ್ತಿಗಳಾಗಿ, ಆಚಲ-ಅಡೋಲ ಸ್ಥಿತಿಯಲ್ಲಿ ಸ್ಥಿತರಾಗಿರಿ. ಸ್ಥಿತಿಯಿಂದ ಕೆಳಗಡೆ ಇಳಿಯಬೇಡಿ. ಅಪ್ಸೆಟ್ ಆಗುವುದು ಅರ್ಥಾತ್ ಸ್ಥಿತಿಯಲ್ಲಿ ಸ್ಥಿತರಾಗಿಲ್ಲವೆಂದಾಗ ಅಪ್ಸೆಟ್ ಆಗುತ್ತಾರೆ. ಯಾರು ಸ್ಥಿತಿಯಲ್ಲಿ ಸ್ಥಿತರಾಗಿರುತ್ತಾರೆಯೋ ಅವರು ಸ್ವಪ್ನದಲ್ಲಿಯೂ ಸಹ ಅಪ್ಸೆಟ್ ಆಗಲು ಸಾಧ್ಯವಿಲ್ಲ.

ಮಾತೆಯರು ಏನು ತಿಳಿದುಕೊಂಡಿದ್ದೀರಿ? ಸ್ಥಿತಿಯಲ್ಲಿ ಸ್ಥಿತರಾಗುವುದು, ಕುಳಿತುಕೊಳ್ಳುವುದು ಬರುತ್ತದೆಯೇ? ಏರು-ಪೇರು ಆಗುವುದಿಲ್ಲ ತಾನೇ? ಬಾಪ್‌ದಾದಾ ಕಂಬೈಂಡ್ ಆಗಿದ್ದಾರೆ. ಯಾವಾಗ ಸರ್ವಶಕ್ತಿವಂತ ತಮ್ಮ ಕಂಬೈಂಡ್ ಆಗಿದ್ದಾರೆ ಅಂದಮೇಲೆ ತಮಗೆ ಏನು ಭಯವಿದೆ! ಒಂಟಿ ಎಂದು ತಿಳಿದರೆ ಏರು-ಪೇರಿನಲ್ಲಿ ಬರುತ್ತೀರಿ. ಕಂಬೈಂಡ್ ಆಗಿದ್ದಾಗ ಎಷ್ಟೇ ಏರು- ಪೇರು ಇರಲಿ ಆದರೆ ತಾವು ಆಚಲರಾಗಿರುತ್ತೀರಿ. ಮಾತೆಯರೇ ಸರಿಯಲ್ಲವೇ? ಸರಿ ತಾನೇ, ಕಂಬೈಂಡ್ ಆಗಿದ್ದೀರಲ್ಲವೇ! ಒಂಟಿಯಂತೂ ಅಲ್ಲ ತಾನೇ? ತಂದೆಯ ಜವಾಬ್ದಾರಿ ಇದೆ, ಒಂದುವೇಳೆ ತಾವು ಸ್ಥಿತಿಯಲ್ಲಿ ಸ್ಥಿತರಾಗಿದ್ದರೆ ತಂದೆಯ ಜವಾಬ್ದಾರಿ, ಆಪ್ಸೆಟ್ ಆದರೆ ನಿಮ್ಮ ಜವಾಬ್ದಾರಿ.

ಆತ್ಮರಿಗೆ ಸಂದೇಶದ ಮೂಲಕ ಸಹಯೋಗ ಕೊಡುತ್ತಾ ಇದ್ದರೆ ಆಗ ದಾತಾ ಸ್ವರೂಪದಲ್ಲಿ ಸ್ಥಿತರಾಗಿರುತ್ತೀರಿ, ಆಗ ದಾತಾತನದ ಪುಣ್ಯದ ಫಲ, ಶಕ್ತಿ ಸಿಗುತ್ತಿರುತ್ತದೆ. ನಡೆಯುತ್ತಾ-ತಿರುಗಾಡುತ್ತಾ ತಮ್ಮನ್ನು ಆತ್ಮ

ಮಾಡಿಸುವಂತಹದ್ದು ಹಾಗೂ ಈ ಕರ್ಮೇದ್ರಿಯಗಳು ಮಾಡುವ ಕರ್ಮಾಚಾರಿಯಾಗಿದೆ, ಈ ಆತ್ಮದ ಸ್ಮೃತಿಯ ಅನುಭವ ಸದಾ ಪ್ರತ್ಯಕ್ಷ ರೂಪದಲ್ಲಿ ಇರಲಿ, ನಾನು ಇರುವುದೇ ಆತ್ಮ... ಎನ್ನುವುದಲ್ಲ. ಸ್ಮೃತಿಯಲ್ಲಿ ಪ್ರತ್ಯಕ್ಷರೂಪದಲ್ಲಿ ಇರಲಿ. ಮರೆತುಹೋಗಿರುತ್ತದೆ ಆದರೆ ಪ್ರತ್ಯಕ್ಷ ರೂಪದಲ್ಲಿ ಇರುವುದರಿಂದ ಆ ನಶೆ, ಖುಷಿ ಹಾಗೂ ನಿಯಂತ್ರಣಾ ಶಕ್ತಿ ಇರುತ್ತದೆ. ಆನಂದವೂ ಇರುತ್ತದೆ, ಏಕೆ! ಸಾಕ್ಷಿಯಾಗಿ ಕರ್ಮ ಮಾಡಿಸುತ್ತೀರಿ. ಪದೇ-ಪದೇ ಪರಿಶೀಲನೆ ಮಾಡಿಕೊಳ್ಳಿ - ಮಾಡಿಸುವಂತಹವನಾಗಿ ಕರ್ಮವನ್ನು ಮಾಡಿಸುತ್ತಿದ್ದೇನೆಯೇ? ಹೇಗೆ ರಾಜಾ ತನ್ನ ಕರ್ಮೇಂದ್ರಿಯಗಳನ್ನು ಆರ್ಡರ್ನಲ್ಲಿ ಇಟ್ಟುಕೊಳ್ಳುತ್ತಾನೆ, ಆಜ್ಞೆಯಂತೆ ಮಾಡಿಸುತ್ತಾನೆ, ಆ ರೀತಿ ಆತ್ಮ ಮಾಡಿಸುವಂತಹ ಸ್ವರೂಪದ ಸ್ಮೃತಿಯಲ್ಲಿ ಇದ್ದಾಗ ಸರ್ವ ಕರ್ಮೇಂದ್ರಿಯಗಳು ಆಜ್ಞೆಯನುಸಾರ ಇರುತ್ತವೆ. ಮಾಯೆಯ ಆಜ್ಞೆಯಲ್ಲಿ ಇರುವುದಿಲ್ಲ, ತಮ್ಮ ಆಜ್ಞೆಯಲ್ಲಿ ಇರುತ್ತವೆ. ಇಲ್ಲವಾದರೆ ಮಾಯೆ ನೋಡುತ್ತದೆ – ಮಾಡಿಸುವಂತಹ ಆತ್ಮ ಬಲಹೀನವಾಗಿ ಇದ್ದರೆ ಮಾಯೆಯು ಆಜ್ಞೆಯನ್ನು ಮಾಡಲು ಶುರು ಮಾಡುತ್ತದೆ. ಕೆಲವೊಮ್ಮೆ ಸಂಕಲ್ಪದ ಶಕ್ತಿ, ಕೆಲವೊಮ್ಮೆ ಮುಖದ ಶಕ್ತಿ ಮಾಯೆಯ ಆಜ್ಞೆಯಂತೆ ನಡೆಯುತ್ತವೆ. ಆದ್ದರಿಂದ ಸದಾ ಪ್ರತಿಯೊಂದು ಕರ್ಮೇದ್ರಿಯಗಳನ್ನು ತಮ್ಮ ಆಜ್ಞೆಯಲ್ಲಿ ನಡೆಸಿ. ಈ ರೀತಿ ಹೇಳುವುದಿಲ್ಲ – ಇಷ್ಟವಿರಲಿಲ್ಲ ಆದರೆ ಆಗಿ ಹೋಯಿತು. ಯಾವುದು ಇಚ್ಛಿಸುತ್ತೀರೋ ಅದೇ ಆಗುತ್ತದೆ. ಈಗಿನಿಂದ ರಾಜ್ಯಾಧಿಕಾರಿಗಳಾಗುವ ಸಂಸ್ಕಾರ ತುಂಬಿಕೊಂಡರೆ ಆಗಲೇ ಅಲ್ಲಿಯೂ ರಾಜ್ಯವನ್ನು ಮಾಡುತ್ತೀರಿ. ಸ್ವರಾಜ್ಯ ಅಧಿಕಾರಿಯ ಸೀಟಿನಿಂದ ಎಂದೂ ಕೆಳಗೆ ಬರಬೇಡಿ. ಒಂದುವೇಳೆ ಕರ್ಮೇಂದ್ರಿಯಗಳು ಅಧೀನದಲ್ಲಿದ್ದಾಗ ಪ್ರತಿಯೊಂದು ಶಕ್ತಿಯೂ ತಮ್ಮ ಆಜ್ಞೆಯ ಮೇರೆಗೆ ಇರುತ್ತದೆ. ಯಾವ ಶಕ್ತಿಯು ಯಾವ ಸಮಯದಲ್ಲಿ ಅವಶ್ಯವಿದೆಯೋ ಆಗ ಪ್ರತ್ಯಕ್ಷವಾಗುತ್ತದೆ. ಈ ರೀತಿಯಲ್ಲಿ ಕೆಲಸ ಪೂರ್ಣವಾದ ನಂತರ ತಾವು ಸಹನಶಕ್ತಿಗೆ ಬಾ ಎಂದು ಆಜ್ಞೆ ಮಾಡಿದರೆ, ಕೆಲಸ ಪೂರ್ಣವಾದ ನಂತರ ಅದು ಬರುತ್ತದೆ. ಪ್ರತೀ ಶಕ್ತಿಯು ತಮ್ಮ ಆಜ್ಞೆಯ ಮೇಲೆ ಪ್ರತ್ಯಕ್ಷವಾಗುತ್ತದೆ ಏಕೆಂದರೆ ಪ್ರತಿಯೊಂದು ಶಕ್ತಿಯು ಪರಮಾತ್ಮನ ಕೊಡುಗೆಯಾಗಿದೆ. ಅಂದಾಗ ಪರಮಾತ್ಮನ ಕೊಡುಗೆ ತಮ್ಮ ವಸ್ತುವಾಯಿತು ಅಂದಾಗ ತಮ್ಮ ವಸ್ತುವನ್ನು ಹೇಗಾದರೂ ಉಪಯೋಗಿಸಿ, ಯಾವಾಗ ಬೇಕಾದರೂ ಉಪಯೋಗಿಸಿ ಹಾಗೆ ಈ ಸರ್ವಶಕ್ತಿಗಳು ನಿಮ್ಮ ಆಜ್ಞೆಯಲ್ಲಿರಬೇಕು. ಸರ್ವ ಕರ್ಮೇಂದ್ರಿಯಗಳು ನಿಮ್ಮ ಆಜ್ಞೆಯಲ್ಲಿದ್ದರೆ ಅದಕ್ಕೇ ಸ್ವರಾಜ್ಯ ಅಧಿಕಾರಿ, ಮಾಸ್ಟರ್ ಸರ್ವಶಕ್ತಿವಂತರೆಂದು ಹೇಳಲಾಗುತ್ತದೆ. ಆ ರೀತಿಯ ಪಾಂಡವರಾಗಿದ್ದೀರಾ? ಮಾಸ್ಟರ್ ಸರ್ವಶಕ್ತಿವಂತರೂ ಆಗಬೇಕು ಮತ್ತು ಸ್ವರಾಜ್ಯ ಅಧಿಕಾರಿಗಳೂ ಆಗಬೇಕು. ಸ್ವರಾಜ್ಯ ಅಧಿಕಾರಿಗಳು ಮುಖದಿಂದ ಬಂದುಬಿಟ್ಟಿತು ಎನ್ನುವುದಿಲ್ಲ. ಬಂದುಬಿಟ್ಟಿತು ಎಂದರೆ ಅಜ್ಞೆಯನ್ನು ಕೊಟ್ಟವರು ಯಾರು ಎಂದು ನೋಡಿ. ಇಷ್ಟವಿರಲಿಲ್ಲ ಆದರೂ ನೋಡಿದೆವು. ಮಾಡಲು ಇಷ್ಟವಿರಲಿಲ್ಲ. ಆದರೂ ಮಾಡಿದೆವು, ಇದು ಯಾರ ಆಜ್ಞೆಯಂತೆ ಆಗುತ್ತಿದೆ? ಅವರಿಗೆ ಅಧಿಕಾರಿಗಳೆಂದು ಹೇಳಲಾಗುತ್ತದೆಯೋ ಅಥವಾ ಅಧಿಕನರೇಂದು ಹೇಳಲಾಗುತ್ತದೆಯೋ? ಅಂದಾಗ ಆಧೀನರಾಗಬೇಡಿ, ಅಧಿಕಾರಿಗಳಾಗಿ. ಒಳ್ಳೆಯದು.

ಬಾಪ್‌ದಾದಾ ಹೇಳುತ್ತಾರೆ - ಹೇಗೆ ಈಗ ಮಧುಬನದಲ್ಲಿ ಬಹಳ ಬಹಳ ಖುಷಿಯಾಗಿದ್ದೀರೋ ಹಾಗೆಯೇ ಸದಾಕಾಲ ಖುಷಿಯಾಗಿರಬೇಕು ಏಕೆಂದರೆ ಆತ್ಮಿಕ ಗುಲಾಬಿಗಳಾಗಿದ್ದೀರಿ. ನೋಡಿ ನಾಲ್ಕೂ ಕಡೆ ಎಲ್ಲಾ ಆತ್ಮಿಕ ಗುಲಾಬಿಗಳು ಅರಳಿರುವ ಗುಲಾಬಿಗಳಿವೆ. ಬಾಡಿಹೋಗಿರುವಂತಹ ಗುಲಾಬಿಗಳಲ್ಲ, ಅರಳಿರುವ ಗುಲಾಬಿಗಳಾಗಿದ್ದೀರಿ ಅಂದಾಗ ಸದಾ ಆ ರೀತಿಯ ಖುಷಿಯ ಅದೃಷ್ಟವಂತರು ಮತ್ತು ಖುಷಿಯು ಚಹರೆಯಲ್ಲಿರಬೇಕು. ಯಾರೇ ತಮ್ಮ

ಚಹರೆಯನ್ನು ನೋಡಿದಾಗ ನಿಮಗೆ ಏನು ಸಿಕ್ಕಿದೆ, ಬಹಳ ಖುಷಿಯಾಗಿದ್ದೀರಿ ಎಂದು ಕೇಳಬೇಕು. ಪ್ರತಿಯೊಬ್ಬರ ಚಹರೆಯು ತಂದೆಯ ಪರಿಚಯವನ್ನು ಕೊಡಬೇಕು. ಹೇಗೆ ಚಿತ್ರವು ಪರಿಚಯವನ್ನು ಕೊಡುತ್ತದೆಯೋ ಹಾಗೆಯೇ ತಮ್ಮ ಚಹರೆಯು ತಂದೆಯು ಸಿಕ್ಕಿದ್ದಾರೆ ಎಂಬ ತಂದೆಯ ಪರಿಚಯವನ್ನು ಕೊಡಬೇಕು. ಒಳ್ಳೆಯದು.

ಎಲ್ಲರೂ ಚೆನ್ನಾಗಿದ್ದೀರಾ? ವಿದೇಶದವರು ಬಂದು ತಲುಪಿದ್ದಾರೆ. ಇಲ್ಲಿ ಚೆನ್ನಾಗಿರುತ್ತದೆಯಲ್ಲವೆ? (ಮೋಹಿನಿ ಬೆಹನ್, ನ್ಯೂಯಾರ್ಕ್) ಏರುಪೇರುಗಳನ್ನು ಕೇಳುವುದರಿಂದ ದೂರವಾದಿರಿ ಒಳ್ಳೆಯದನ್ನು ಮಾಡಿದಿರಿ, ಎಲ್ಲರೂ ಒಟ್ಟಿಗೆ ಬಂದು ತಲುಪಿದ್ದೀರಿ, ಒಳ್ಳೆಯದನ್ನು ಮಾಡಿದಿರಿ. ಒಳ್ಳೆಯದು. ಡಬಲ್ ವಿದೇಶಿಗಳಿಗೆ ಡಬಲ್ ನಶೆಯಿದೆಯಲ್ಲವೆ! ನಾವು ಡಬಲ್ ವಿದೇಶಿಗಳಾಗಿದ್ದೇವೆಂದು ಮನಸ್ಸಿನಿಂದಲೂ ಹೇಳಬೇಕು ಅಷ್ಟು ನಿಮಗೆ ನಶೆಯಿರಬೇಕು. ಡಬಲ್ ನಶೆಯಿದೆ, ಸ್ವರಾಜ್ಯ ಅಧಿಕಾರಿಗಳೇ ವಿಶ್ವದ ಅಧಿಕಾರಗಳಾಗುತ್ತಾರೆ. ಈ ರೀತಿ ಡಬಲ್ ನಶೆಯಿದೆಯಲ್ಲವೆ! ಬಾಪ್‌ದಾದಾರವರಿಗೂ ಇಷ್ಟವಾಗುತ್ತದೆ. ಒಂದುವೇಳೆ ಯಾವುದಾದರೂ ಗ್ರೂಪಿನಲ್ಲಿ ಡಬಲ್ ವಿದೇಶಿಗಳಿಲ್ಲದಿದ್ದರೆ ಚೆನ್ನಾಗಿರುವುದಿಲ್ಲ. ವಿಶ್ವದ ತಂದೆಯಾಗಿದ್ದಾರಲ್ಲವೇ ಅಂದಾಗ ವಿಶ್ವದವರೇ ಬೇಕಲ್ಲವೇ? ಎಲ್ಲರೂ ಬೇಕು. ಮಾತೆಯರು ಇಲ್ಲದಿದ್ದರೆ ಚೆನ್ನಾಗಿರುವುದಿಲ್ಲ. ಪಾಂಡವರಿಲ್ಲದಿದ್ದರೆ ಸುಂದರತೆ ಕಡಿಮೆಯಾಗುತ್ತದೆ. ನೋಡಿ ಯಾವುದಾದರೂ ಸೇವಾಕೇಂದ್ರದಲ್ಲಿ ಪಾಂಡವರೇ ಇಲ್ಲದಿದ್ದರೆ ಕೇವಲ ಮಾತೆಯರಿದ್ದರೆ ಚೆನ್ನಾಗಿರುತ್ತದೆಯೇ! ಮತ್ತು ಕೇವಲ ಪಾಂಡವರಿದ್ದು ಶಕ್ತಿಯರಿಲ್ಲದಿದ್ದರೆ ಸೇವಾಕೇಂದ್ರವು ಶೃಂಗರಿತವಾಗಿರುವುದಿಲ್ಲ. ಇಬ್ಬರೂ ಬೇಕು. ಮಕ್ಕಳೂ ಸಹ ಬೇಕು. ನಮ್ಮ ಹೆಸರನ್ನು ಏಕೆ ತೆಗೆದುಕೊಳ್ಳಲಿಲ್ಲವೆಂದು ಮಕ್ಕಳು ಕೇಳುತ್ತಿದ್ದಾರೆ. ಮಕ್ಕಳೂ ಸಹ ಶೃಂಗಾರವಾಗಿದ್ದಾರೆ.

ಒಳ್ಳೆಯದು. ಈಗ ಒಂದು ಸೆಕೆಂಡಿನಲ್ಲಿ ನಿರಾಕಾರಿ ಆತ್ಮರಾಗಿ ನಿರಾಕಾರಿ ತಂದೆಯ ನೆನಪಿನಲ್ಲಿ ಲವಲೀನರಾಗಿ. (ಡ್ರಿಲ್)

**ನಾಲ್ಕೂ ಕಡೆಯ ಸರ್ವ ಸ್ವರಾಜ್ಯಾಧಿಕಾರಿ, ಸದಾ ಸಾಕ್ಷಿತನದ ಸೀಟಿನಲ್ಲಿ ಸೆಟ್ ಆಗಿರುವಂತಹ ಅಚಲ, ಅಡೋಲ ಆತ್ಮರಿಗೆ, ಸದಾ ದಾತಾತನದ ಸ್ಮೃತಿಯಿಂದ ಸರ್ವರಿಗೂ ಜ್ಞಾನ, ಶಕ್ತಿ, ಗುಣ ಕೊಡುವಂತಹ ವಿಶಾಲ ಹೃದಯಿ ಆತ್ಮರಿಗೆ, ಸದಾ ತಮ್ಮ ಚಹರೆಯಿಂದ ತಂದೆಯ ಚಿತ್ರವನ್ನು ತೋರಿಸುವಂತಹ ಶ್ರೇಷ್ಠಾತ್ಮರಿಗೆ, ಸದಾ ಖುಷಿಯಾಗಿರುವಂತಹ, ಸದಾ ಖುಷಿಯ ಚಹರೆಯುಳ್ಳಂತಹ ಆತ್ಮಿಕ ಗುಲಾಬಿ, ಮಕ್ಕಳಿಗೆ ಬಾಪ್‌ದಾದಾರವರ ನೆನಪು, ಪ್ರೀತಿ ಮತ್ತು ನಮಸ್ತೆ.**

ರಿವೈಸ್ ಕೋರ್ಸ್ 13-02-2003.

***ವರ್ತಮಾನ ಸಮಯದಲ್ಲಿ ತಮ್ಮ ತಯಾ ಹೃದಯ ಹಾಗೂ ದಾತಾ ಸ್ವರೂಪವನ್ನು ಪ್ರತ್ಯಕ್ಷ ಮಾಡಿರಿ.***

ಪ್ರತಿಯೊಬ್ಬ ಮಗುವು ಮಾಸ್ಟರ್ ದಾತನಾಗಿ ಆತ್ಮರನ್ನು ತಂದೆಗೆ ಸಮೀಪ ತರಲು ಅಂತರಾಳದಿಂದ ಪ್ರಯತ್ನ ಮಾಡುತ್ತಿದ್ದಾರೆ. ವಿಶ್ವದಲ್ಲಿ ಅನೇಕ ಪ್ರಕಾರದ ಆತ್ಮರು ಇದ್ದಾರೆ. ಕೆಲವರಿಗೆ ಜ್ಞಾನಾಮೃತ ಬೇಕು, ಕೆಲವರಿಗೆ ಶಕ್ತಿ ಬೇಕು, ಇನ್ನೂ ಕೆಲವರಿಗೆ ಗುಣಗಳು ಬೇಕು. ಮಕ್ಕಳಾದ ನಿಮ್ಮ ಹತ್ತಿರ ಸರ್ವ ಖಜಾನೆಗಳು ಅಖಂಡವಾಗಿ ಇವೆ. ನೀವು ಪ್ರತಿಯೊಬ್ಬ ಆತ್ಮನ ಕಾಮನೆಯನ್ನು ಪೂರ್ಣ ಮಾಡುವವರು. ದಿನ ಪ್ರತಿ ದಿನ ಸಮಾಪ್ತಿಯ ಸಮಯ ಸಮೀಪಕ್ಕೆ

ಬರುತ್ತಿರುವ ಕಾರಣವಾಗಿ ಈಗ ಆತ್ಮರು ಯಾವುದೋ ಒಂದು ಹೊಸ ಆಶ್ರಯವನ್ನು ಹುಡುಕಾಡುತ್ತಿದ್ದಾರೆ. ನೀವು ಆ ಹೊಸ ಆಶ್ರಯವನ್ನು ಕೊಡಲು ನಿಮಿತ್ತವಾಗಿದ್ದೀರಿ. ನೀವು ಬಾಪ್‌ದಾದಾರವರೊಂದಿಗೆ ಕಂಬೈನ್ಡ್ ಆಗಿ ಇದ್ದೀರಿ. ಸರ್ವಶಕ್ತಿವಾನ್ ನಿಮ್ಮ ಕಂಬೈನ್ಡ್ ಸ್ವರೂಪವಾಗಿದ್ದರೆ ಇನ್ನೂ ನಿಮಗೆ ಭಯವೇಕೆ? ಒಬ್ಬಂಟಿಯಾಗಿ ಭಾವಿಸಿದರೆ ಏರುಪೇರಿನಲ್ಲಿ ಬರುತ್ತೀರಿ. ಕಂಬೈನ್ಡ್ ಎಂದು ಭಾವಿಸಿದಾಗ ಎಷ್ಟೇ ಏರುಪೇರಾದರು ನೀವು ಅಚಲವಾಗಿ ಇರುತ್ತೀರಿ. ಎಂದು ವರದಾತ ತಂದೆ ತನ್ನ ಜ್ಞಾನದಾತಾ, ಶಕ್ತಿಯ ದಾತಾ, ಗುಣದಾತಾ, ಪರಮಾತ್ಮ ಸಂದೇಶವಾಹಕರಾದ ಮಕ್ಕಳನ್ನು ನೋಡುತ್ತಾ ಮಾತನಾಡುತ್ತಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಪ್ರೇಮ ಸ್ವರೂಪ, ಶಿವಪರಮಾತ್ಮ ನನ್ನ ತಂದೆ.

1. ನನ್ನ ಅನಾದಿ, ಆದಿ, ಮಧ್ಯ(ಪೂಜ್ಯ ಸ್ವರೂಪದಲ್ಲಿ), ಬ್ರಾಹ್ಮಣ ರೂಪದಲ್ಲಿಯೂ ದಾತಾಸ್ಥಿತಿಯ ಸಂಸ್ಕಾರವು ತುಂಬಿ ಇದೆ.

2. ನಾನು ನಿರಂತರ ತೆರೆದಿರುವ ಭಂಡಾರವಾಗಿದ್ದೇನೆ. (ಅವರು ಕೊಟ್ಟರೆ ನಾನು ಕೊಡುತ್ತೇನೆ, ಅವರು ಮಾಡಿದರೆ ನಾನು ಮಾಡುತ್ತೇನೆ ಎಂಬುದು ನನ್ನ ಸಂಕಲ್ಪದಲ್ಲಿಯೂ ಇರುವುದಿಲ್ಲ).

3. ನಾನು ನನ್ನ ದಾತಾ ಸ್ಥಿತಿಯ ಸಂಸ್ಕಾರವನ್ನು ಪ್ರತ್ಯಕ್ಷ ರೂಪದಲ್ಲಿಟ್ಟುಕೊಂಡು ನನಗೆ ಎಲ್ಲಾ ಕಡೆಯಿಂದಲೂ ಸ್ವತಹವಾಗಿ ಸಹಯೋಗ ಮತ್ತು ಸಫಲತೆ ಸಹಜವಾಗಿ ಲಭಿಸುವಂತೆ ಆಗಿದ್ದೇನೆ. (ಆತ್ಮರಿಂದ ಹಾಗೂ ಪ್ರಕೃತಿಯಿಂದಲೂ)

4. ನಾನು ಇಡೀ ದಿನದಲ್ಲಿ ಸಂಕಲ್ಪದ ಮೂಲಕ, ವಾಣಿಯ ಮೂಲಕ ಸಂಬಂಧ ಸಂಪರ್ಕಗಳ ಮೂಲಕ ಎಷ್ಟು ಜಮಾ ಮಾಡಿಕೊಂಡಿದ್ದೇನೆ ಎಂದು ನೋಟ್ ಮಾಡಿಕೊಳ್ಳುತ್ತಿದ್ದೇನೆ.

5. ನಾನು ಯೋಗವನ್ನು ಜ್ವಾಲಾ ರೂಪವನ್ನಾಗಿಸಿಕೊಳ್ಳುವುದರೊಂದಿಗೆ ನನ್ನ ದೃಷ್ಟಿಯಲ್ಲಿ(ಆತ್ಮಿಕ ದೃಷ್ಟಿ) ಯಾವುದೋ ಒಂದು ಅನುಭವ ಮಾಡಿಸುವ ಹೊಳಪು ಬಂದಿದೆ.

6. ನಾನು ಪರಮಾತ್ಮನ ಛತ್ರ ಛಾಯೆಯ ನೆರಳಿನಲ್ಲಿ ಯಾವುದೇ ಏರುಪೇರು ಇಲ್ಲದೆ ಅಚಲವಾಗಿ ಸುರಕ್ಷಿತವಾಗಿ ಇದ್ದೇನೆ.

7. ನಾನು ಸ್ವರಾಜ್ಯಾಧಿಕಾರಿಯಾಗಿ, ನಿಶ್ಚಿಂತ ಚಕ್ರವರ್ತಿಯಾಗಿ, ಅಚಲ, ಅಡೋಲ್ ಸ್ಥಿತಿಯ ಸೀಟ್ ನ ಮೇಲೆ ಸೆಟ್ಟಾಗಿ ತಂದೆಯೊಂದಿಗೆ ಕಂಬೈನ್ಡ್ ಆಗಿದ್ದೇನೆ.

8. ನಾನು ನಡೆದಾಡುತ್ತಾ ಅಡ್ಡಾಡುತ್ತಾ ನನ್ನನ್ನು ನಾನು ಮಾಡಿಸುವ ಮತ್ತು ಈ ಕರ್ಮೇಂದ್ರಿಯಗಳು ಮಾಡುವಂತಹ ಕರ್ಮಚಾರಿಯಾಗಿ ಭಾವಿಸಿ ಆತ್ಮನ ಸ್ಮೃತಿಯ ಅನುಭವವನ್ನು ಪ್ರತ್ಯಕ್ಷ ರೂಪದಲ್ಲಿರುವಂತೆ ಸರ್ವ ಕರ್ಮೇಂದ್ರಿಯಗಳನ್ನು ನನ್ನ ನಿಯಂತ್ರಣದಲ್ಲಿ ಇಟ್ಟುಕೊಂಡಿದ್ದೇನೆ.

9. ನಾನು ಸರ್ವಕರ್ಮೇಂದ್ರಿಯಗಳನ್ನು ನನ್ನ ಆರ್ಡರ್ನಲ್ಲಿಟ್ಟುಕೊಳ್ಳುವ (ಅಜ್ಞಾನುಸಾರ) ಸ್ವರಾಜ್ಯಾಧಿಕಾರಿ, ಮಾಸ್ಟರ್ ಸರ್ವ ಶಕ್ತಿವಾನ್ ಆಗಿದ್ದೇನೆ.

10. ನಾನು ಅರಳಿರುವ ಆತ್ಮಿಕ ಗುಲಾಬಿಯಾಗಿದ್ದೇನೆ.

11. ನನ್ನ ಚಹರೆಯ ಮೂಲಕ ತಂದೆ ಲಭಿಸಿದ್ದಾರೆ ಎಂಬ ಪರಿಚಯವನ್ನು ಕೊಡುತ್ತಿದ್ದೇನೆ.

12. ನಾನು ಸ್ವರಾಜ್ಯಾಧಿಕಾರಿಯಿಂದ ವಿಶ್ವರಾಜ್ಯಾಧಿಕಾರಿ ಆಗುತ್ತೇನೆ ಎಂಬ ಡಬಲ್ ನಶೆಯಲ್ಲಿ ಇದ್ದೇನೆ.